ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿ ಪಡಿಸುವುದು

738 ಶ್ರೀ ಅಪ್ಪಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ : ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ನಗರದಲ್ಲಿರುವ ಪ್ರಸಿದ್ಧ ಐತಿಹಾಸಿಕ ಪ್ರವಾಸೋದ್ಯಮ ಸ್ಥಳಗಳು ಯಾವುವು;

ಆ) ಈ ಐತಿಹಾಸಿ ಪ್ರವಾಸಿ ಸ್ಥಳಗಳನ್ನು ವೀಕ್ಷಿಸಲು ಆಗಮಿಸುತ್ತಿರುವ ದೇಶಿಯ ಹಾಗೂ ವಿದೇಶಿ ಪ್ರವಾಸಿಗರ ಸಂಖ್ಯೆ ಎಷ್ಟು;

ಇ) ಪ್ರವಾಸಿಗರ ಆಗಮನದಿಂದ ಸರ್ಕಾರಕ್ಕೆ ಬರುತ್ತಿರುವ ಪ್ರತ್ಯಕ್ಷ ಹಾಗೂ ಪರೋಕ್ಷ ಆದಾಯ ಎಷ್ಟು;

ಈ) ಈ ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ ಕಳೆದ ಮೂರು ವರ್ಷಗಳಿಂದ ಸರ್ಕಾರ ಬಿಡುಗಡೆ ಮಾಡಿರುವ ಹಣ ಎಷ್ಟು; (ವಿವರ ನೀಡುವುದು);

ಉ) ಪ್ರವಾಸಿಗರನ್ನು ಆಕರ್ಷಿಸಲು ಸರ್ಕಾರ ಯಾವ ಯಾವ ಉತ್ತೇಜಕ ಕ್ರಮಗಳನ್ನು ಕೈಗೊಂಡಿದೆ;

ಊ) ಪ್ರವಾಸಿಗರ ಅನುಕೂಲಕ್ಕಾಗಿ ಯಾವ ಯಾವ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ;

ಋ) ಈ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯಾವ ಯಾವ ಯೋಜನೆಗಳನ್ನು ಹಾಕಿಕೊಂಡಿದೆ?

ಶ್ರೀ ಜಿ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ಬಿಜಾಪುರ ನಗರದಲ್ಲಿ ಗೋಲ್‌ಗುಮ್ಮಟ, ಇಬ್ರಾಹಿಂರೋಜಾ, ಮೆಹತಾರ್‌ಮಹಲ್, ಸಾತ್‌ಮಂಜಿಲ್, ತಾಜ್‌ಬಾವಡಿ, ಬಾರಾಕಮಾನ್, ವಾಚ್‌ಟವರ್, ಜೋಡುಗುಮ್ಮಟ, ಮಾಲಿಕ್ಯಮೈದಾನ್, ಜುಮ್ಮಾಮಸೀದಿ, ಅಸರ್‌ಮಹಲ್, ಗಗನ್‌ಮಹಲ್ ಮುಂತಾದ ಪ್ರಸಿದ್ಧ ಪ್ರವಾಸಿ ಸ್ಥಳಗಳು ಇರುತ್ತವೆ.

The following tourist spots are important places in Bijapur City:

Golbumbaz, Ibrahim Roja, Mehatar Mahal, Saatmanjil, Tajbawadi, Barakaman, Watch Tower, Jodgumbaz, Malik-Maidan, Jumma Majid, Asar Mahal, Gagan Mahal.

ಆ) ಈ ಐತಿಹಾಸಿಕ ಸ್ಥಳಗಳನ್ನು ವೀಕ್ಷಿಸಲು ದಿನಂಪ್ರತಿ 3000–5000 ದೇಶೀಯ ಪ್ರವಾಸಿಗರು ಹಾಗೂ 10–15 ವಿದೇಶಿಯ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ.

On an average 3000-5000 domestic tourists and 10-15 foreign tourists are visiting these places everyday.

ಇ) ಪ್ರವಾಸಿಗರ ಆಗಮನದಿಂದ ರಾಜ್ಯ ಸರ್ಕಾರಕ್ಕೆ ನೇರವಾಗಿ ಯಾವುದೇ ಆದಾಯ ಬರುವುದಿಲ್ಲ. ಪರೋಕ್ಷ ಆದಾಯ ಇಂತಿಷ್ಟೇ ಬರುತ್ತದೆಂದು ಹೇಳಲು ಸಾಧ್ಯವಾಗುವುದಿಲ್ಲ.

There is no direct income from the visiting tourists to the State Govt. and exact figure is not available in the Department about the indirect income.

ಈ) 2006–07ನೇ ಸಾಲಿನಲ್ಲಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗೆ ರೂ.15.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

2007–08ನೇ ಸಾಲಿನಲ್ಲಿ ರೂ.100.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಬಿಜಾಪುರಕ್ಕೆ ಬಿಡುಗಡೆ ಮಾಡಲಾಗಿದೆ.

2008–09ನೇ ಸಾಲಿನಲ್ಲಿ ರೂ.100.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಬಿಜಾಪುರಕ್ಕೆ ಬಿಡುಗಡೆ ಮಾಡಲಾಗಿದೆ.

An amount of Rs. 15.00 lakhs has been released to District Tourism Promotion Council, Bijapur during 2006-7.

An amount of Rs.100.00 lakhs has been released to Deputy Commissioner, Bijapur during 2007-08.

An amount of Rs.100.00 lakhs has been released to Deputy Commissioner, Bijapur during 2008-09.

ಉ) ಪ್ರವಾಸಿಗರ ಅನುಕೂಲಕ್ಕಾಗಿ ಮೂಲಭೂತ ಸೌಕರ್ಯಗಳಾದ ಶೌಚಾಲಯ, ಕುಡಿಯುವ ನೀರು, ವಸತಿ ಸೌಕರ್ಯ, ಕೂಡು ರಸ್ತೆಗಳ ಅಭಿವೃದ್ಧಿ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

ಅಲ್ಲದೇ, ಈ ಸ್ಥಳಗಳ ಬಗ್ಗೆ ಹೆಚ್ಚು ಪ್ರವಾಸಿಗರನ್ನು ಆಕರ್ಷಿಸಲು ಉತ್ತಮವಾದ ವರ್ಣರಂಜಿತ ಮಾಹಿತಿ ಮಡಿಕೆಗಳನ್ನು ಹೊರತಂದು ಪ್ರಚಾರ ಒದಗಿಸಲಾಗುತ್ತಿದೆ.

Tourist infrastructure facilities such as Toilet, Drinking Water, Accommodation, Development of Link Roads etc., are being taken up to facilitate the visiting tourists.

Colorful information folders about these places have been brought out by the Department to disseminate information to the tourists.

ಊ) ಪ್ರವಾಸಿಗರ ಅನುಕೂಲಕ್ಕಾಗಿ ಬಿಜಾಪುರದಲ್ಲಿ ಸಹಾಯಕ ನಿರ್ದೇಶಕರ ಕಛೇರಿ ಹಾಗೂ ಮಾಹಿತಿ ಕೇಂದ್ರಗಳನ್ನು ತೆರೆಯಲಾಗಿದೆ. ಪ್ರವಾಸೋದ್ಯಮ ನಿಗಮದ ವತಿಯಿಂದ ವಸತಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಗೋಲ್‌ಗುಮ್ಮಟ, ಬಾರಾಕಮಾನ್, ಇಬ್ರಾಹಿಂರೋಜಾ ಇತ್ಯಾದಿ ಕಡೆಗಳಲ್ಲಿ ತಲಾ ರೂ. 12.50 ಲಕ್ಷಗಳ ವೆಚ್ಚದಲ್ಲಿ ಹೈಟೆಕ್ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯಗಳನ್ನು ನಿರ್ಮಿಸಲಾಗಿದೆ. ಮಾರ್ಗದರ್ಶಿ ಫಲಕಗಳನ್ನು ಅಳವಡಿಸಲಾಗಿದೆ.

Office of the Assistant Director of Tourism along with information centre has been opened in Bijapur. KSRTC is having accommodation facilities. Hightech Toilet and Drinking Water facilities provided at Golbumbaz, Ibrahim Roja, Barakaman etc., at a cost of Rs. 12.50 lakhs each.

ಋ)

1. ಬಿಜಾಪುರದಲ್ಲಿರುವ ಭೂತನಾಳ ಕೆರೆಯ ಹತ್ತಿರ ಲ್ಯಾಂಡ್ ಸ್ಕೇಪಿಂಗ್, ಮಕ್ಕಳ ಉದ್ಯಾನವನ ಇತ್ಯಾದಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.
2. ಮುಖ್ಯರಸ್ತೆಯಿಂದ ಸ್ಮಾರಕಗಳ ಬಳಿಗೆ ತಲುಪಲು ಇರುವ ಕೂಡು ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.
3. ಬಿಜಾಪುರದಲ್ಲಿ ಹೆಲಿಪ್ಯಾಡ್ ಅಭಿವೃದ್ಧಿಪಡಿಸಲು ಯೋಜನೆ ಹಮ್ಮಿಕೊಳ್ಳಲಾಗಿದೆ.
4. ಇಲ್ಲಿ ವಿಮಾನ ನಿಲ್ದಾಣವನ್ನು ಸ್ಥಾಪಿಸುವ ಯೋಜನೆ ರೂಪಿಸಲಾಗುತ್ತಿದೆ.

1. Landscaping works, Children's Park etc., are being taken up at Bootanala Kere in Bijapur.
2. The link roads are being developed.
3. It is proposed to develop Helipad in Bijapur.
4. Initiatives are taken up for providing an airport to this city.